


## ಸಮಾಚಾರ ಸಣ್ಣದಲ್ಲ

### ಓ... ಹೆಸರೇ ತಲೆನೋವು ತಂದಿದೆ!



**ಚೆನ್ನೈ:** ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಓ.ಪನ್ನೀರ್‌ಸೆಲ್ವಂ ಲೋಕಸಭಾ ಚುನಾವಣೆ ವಿಚಾರದಲ್ಲಿ ತೀವ್ರ ಚಿಂತೆಗೊಳಗಾಗುವಂತಾಗಿದೆ. ಕಾರಣ, ಓಚಪ್ಪನ್ ಪನ್ನೀರ್‌ಸೆಲ್ವಂ, ಒಯ್ಯಾ ಥೇವರ್ ಪನ್ನೀರ್‌ಸೆಲ್ವಂ, ಓಛಾ ಥೇವರ್ ಪನ್ನೀರ್‌ಸೆಲ್ವಂ ಮತ್ತು ಒಯ್ಯಾರಾಮ್ ಪನ್ನೀರ್‌ಸೆಲ್ವಂ! ಏಕೆಂದರೆ, ಓ.ಪನ್ನೀರ್‌ಸೆಲ್ವಂ ಅವರು ಸ್ಪರ್ಧೆಗಿಳಿದಿರುವ ರಾಮನಾಥಪುರಂ ಲೋಕಸಭಾ ಕ್ಷೇತ್ರದಲ್ಲಿ ಓ.ಪನ್ನೀರ್‌ಸೆಲ್ವಂ ಹೆಸರಿನ ನಾಲ್ವರೂ ಪಕ್ಷೇತರರು ಕಣಕ್ಕಿಳಿದಿದ್ದಾರೆ. ಪ್ರಬಲ ಎದುರಾಳಿ ಇದ್ದಲ್ಲಿ ಅವರದೇ ಹೆಸರಿನ ಹಲವರನ್ನು ಚುನಾವಣೆ ಕಣಕ್ಕಿಳಿಸಿ 'ಮತದಾರರು ಗೊಂದಲ'ಕ್ಕೆ ಒಳಗಾಗುವಂತೆ ಮಾಡುವುದು, ಆ ಮೂಲಕ ಮತ ಚದರುವಂತೆ ಮಾಡಿ ಪ್ರಬಲ ಪ್ರತಿಸ್ಪರ್ಧಿ ಸೋಲುವಂತೆ ಮಾಡುವುದು ದೇಶದ ರಾಜಕಾರಣದಲ್ಲಿ ಹಳೆಯ ತಂತ್ರ. ಅದೇ ತಂತ್ರವನ್ನೂ ಓ.ಪನ್ನೀರ್‌ಸೆಲ್ವಂ ರಾಜಕೀಯ ಎದುರಾಳಿಗಳೂ ರಾಮನಾಥಪುರಂ ಕ್ಷೇತ್ರದಲ್ಲಿ ಈ ಬಾರಿ ಮಾಡಿದ್ದಾರೆ. ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿಯೂ 2019ರ ಚುನಾವಣೆಯಲ್ಲಿ ಸುಮಲತಾ ಹೆಸರಿನ ನಾಲ್ವರನ್ನು ಪಕ್ಷೇತರರಾಗಿ ಕಣಕ್ಕಿಳಿಸಲಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

### ಪಂಜಾಬ್‌ನ ಏಕಮೇವ ಎಎಪಿ ಸಂಸದ ಬಿಜೆಪಿಗೆ!




**ದೆಹಲಿ:** ಆಮ್ ಆದ್ಮಿ ಪಕ್ಷದ (ಎಎಪಿ) ಪಂಜಾಬ್‌ನ ಜಲಂಧರ್ ಕ್ಷೇತ್ರದ ಸಂಸದ ಸುಶೀಲಕುಮಾರ ರಿಂಕು ಮತ್ತು ಜಲಂಧರ್ ಕ್ಷೇತ್ರದ ಶಾಸಕರಾದ ಶೀತಲ್ ಅಂಗುರಲ್ ದೆಹಲಿಯ ಬಿಜೆಪಿ ಕಚೇರಿಯಲ್ಲಿ ಬುಧವಾರ ಕಮಲ ಪಕ್ಷಕ್ಕೆ ಸೇರ್ಪಡೆಯಾದರು. ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರು ಎಎಪಿ ಸಂಸದ, ಶಾಸಕರನ್ನು ಬಿಜೆಪಿ ಧ್ವಜ ನೀಡಿ ಪಕ್ಷಕ್ಕೆ ಬರಮಾಡಿಕೊಂಡರು. ಸಂಸದ ರಿಂಕು ಕಳೆದ ವರ್ಷವಷ್ಟೇ ಕಾಂಗ್ರೆಸ್ ತೊರೆದು ಎಎಪಿ ಸೇರಿದ್ದರು. ಬಳಿಕ ಜಲಂಧರ್ ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿದ್ದರು. ಲೋಕಸಭೆ ಕಲಾಪ ವೇಳೆ ಸದನದಲ್ಲಿ ಅಶಿಸ್ತು ತೋರಿ ಅಮಾನತುಗೊಂಡಿದ್ದರು.

### ನಿಮಗೆ ಈ ಕ್ಷೇತ್ರ ಗೊತ್ತ



ಲಖನೌ

**ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ತವರು ಕ್ಷೇತ್ರದಂತಿದ್ದ ಲಖನೌನಲ್ಲಿ ಅವರು ಐದು ಬಾರಿ ಗೆದ್ದಿದ್ದಾರೆ. 1991ರಿಂದಲೂ ಈ ಕ್ಷೇತ್ರ ಬಿಜೆಪಿಯ ಭದ್ರಕೋಟೆ. ಈ ಕ್ಷೇತ್ರದ ಮೊದಲ ಸಂಸದೆ ಜವಾಹರ್ ಲಾಲ್ ನೆಹರು ಅವರ ಸಹೋದರಿ ವಿಜಯಲಕ್ಷ್ಮೀ ಪಂಡಿತ್. ಶೆರೋಜಾವತಿ ನೆಹರು ಅವರು ವಿಜಯಲಕ್ಷ್ಮೀ ಪಂಡಿತ್ ಅವರ ಬಳಿಕ ಆಯ್ಕೆಯಾಗಿದ್ದರು. ಇವರೂ ನೆಹರು ಕುಟುಂಬಕ್ಕೇ ಸೇರಿದವರು. ಸದ್ಯ ಇಲ್ಲಿಂದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂಸದರಾಗಿದ್ದಾರೆ.**



**ಇತಿಹಾಸ**

ಮೊದಲೇ ಹೇಳಿದಂತೆ ಆರಂಭದ ವರ್ಷಗಳಲ್ಲಿ ಈ ಕ್ಷೇತ್ರವೂ ನೆಹರು ಕುಟಂಬದ ಭದ್ರಕೋಟೆಯಾಗಿತ್ತು. ವಿಜಯಲಕ್ಷ್ಮೀ ಪಂಡಿತ್ ಅವರು ಮೊದಲ ಸಂಸದೆ, ಬಳಿಕ ನೆಹರು ಕುಟುಂಬದ ಸಂಬಂಧಿ ಶೆರೋಜಾವತಿ ನೆಹರು ಅವರು ಸ್ಪರ್ಧಿಸಿ ಗೆದ್ದಿದ್ದರು. ವಿಶೇಷವೆಂದರೆ 1955, 1957, 1962ರ ಲೋಕಸಭೆ ಚುನಾವಣೆಗಳಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ಪರ್ಧಿಸಿ ಮೂರು ಬಾರಿ ಸೋತಿದ್ದರು. 1967ರಲ್ಲಿ ಇಲ್ಲಿಂದ ಸ್ವತಂತ್ರ ಅಭ್ಯರ್ಥಿ, ಉರ್ದು ಕವಿ ಆನಂದ್ ನಾರಾಯಣ್ ಮುಲ್ಲಾ ಅವರು ಗೆದ್ದಿದ್ದರು. 1991ರ ವರೆಗೂ ಫಲಿತಾಂಶ ಕಾಂಗ್ರೆಸ್, ಜನತಾದಳದ ನಡುವೆ ತಿರುಗುತ್ತಿತ್ತು. ಆದರೆ, 1991ರ ಬಳಿಕ ಇಲ್ಲಿ ಬಿಜೆಪಿ ಬಿಟ್ಟು ಬೇರೆಯವರು ಗೆದ್ದಿಲ್ಲ. 2014ರಿಂದ ಎರಡು ಬಾರಿ ರಾಜನಾಥ್ ಸಿಂಗ್ ಗೆದ್ದಿದ್ದಾರೆ. ಅದಕ್ಕೂ ಮುನ್ನ ಐದು ಬಾರಿ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರತಿನಿಧಿಸಿದ್ದರು.

ಈ ಕ್ಷೇತ್ರದ ಮತ್ತೊಂದು ವಿಶೇಷವೆಂದರೆ, ಇಲ್ಲಿನ ಎಲ್ಲ ಮತದಾರರು ನಗರವಾಸಿಗಳೇ. ಶೇ.70ರಷ್ಟು ಹಿಂದೂಗಳೇ ಇದ್ದಾರೆ. ಮುಸ್ಲಿಮರು ಶೇ.25ರಷ್ಟಿದ್ದಾರೆ. ಇತರೆ ಧರ್ಮದವರು ಶೇ.5ರಷ್ಟಿದ್ದಾರೆ. ಹೀಗಾಗಿಯೇ ಈ ಕ್ಷೇತ್ರವನ್ನು ಬಿಜೆಪಿ ತನ್ನ ಭದ್ರಕೋಟೆಯಾಗಿ ಇರಿಸಿಕೊಂಡಿದೆ ಎಂಬ ಮಾತುಗಳಿವೆ. ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಏಳು ವಿಧಾನಸಭಾ ಸ್ಥಾನಗಳಿದ್ದು, ಐದರಲ್ಲಿ ಬಿಜೆಪಿ, ಎರಡರಲ್ಲಿ ಎಸ್‌ಪಿ ಇದೆ.

**ಕಳೆದ ಮೂರು ಫಲಿತಾಂಶ**

- 2019 - ರಾಜನಾಥ್ ಸಿಂಗ್
- 2014 - ರಾಜನಾಥ್ ಸಿಂಗ್
- 2009 - ಲಾಲ್ಜಿ ಟಂಡನ್

**ಕ್ಷೇತ್ರ ವಿಶೇಷ**

1. 1991ರಿಂದ ಇಲ್ಲಿ ಬಿಜೆಪಿ ಒಮ್ಮೆಯೂ ಸೋತಿಲ್ಲ.
2. ಆರಂಭದಲ್ಲಿ ಮೂರು ಬಾರಿ ವಾಜಪೇಯಿ ಸೋತಿದ್ದರು.
3. ಐದು ಬಾರಿ ವಾಜಪೇಯಿ ಅವರು ಆಯ್ಕೆಯಾಗಿದ್ದರು.

# ದೇವಭೂಮಿಯಲ್ಲಿ ಯಾರಿಗೆ ಸಿಗಲಿದೆ ಆಶೀರ್ವಾದ?

**ದೇವಭೂಮಿ ಎಂದೇ ಕರೆಯಲ್ಪಡುವ, ಉತ್ತರಾಖಂಡದಲ್ಲಿ ಸದ್ಯ ಬಿಜೆಪಿ ಭದ್ರಕೋಟೆಯಾಗಿದ್ದು, ಎಲ್ಲ ಐದು ಕ್ಷೇತ್ರಗಳಲ್ಲೂ ಕಮಲ ಪಕ್ಷದ ಸಂಸದರೇ ಇದ್ದಾರೆ. ಈ ಬಾರಿ ಬಿಜೆಪಿಗೆ ಪ್ರತಿಸ್ಪರ್ಧೆ ನೀಡಲು ಕಾಂಗ್ರೆಸ್ ಸಜ್ಜಾಗಿದೆ.**

**ರಾಜಕೀಯ ಇತಿಹಾಸ**

ರಾಜ್ಯ 2000ರ ಬಳಿಕ ರಚನೆಯಾಗಿದ್ದು, ಹೀಗಾಗಿ 14ನೇ ಲೋಕಸಭೆಯೇ ಮೊದಲ ಚುನಾವಣೆ. 2004ರ ಮೊದಲ ಚುನಾವಣೆಯಲ್ಲಿ ಬಿಜೆಪಿ ಮೂರು, ಕಾಂಗ್ರೆಸ್ ಮತ್ತು ಎಸ್‌ಪಿ ತಲಾ ಒಂದರಲ್ಲಿ ಗೆದ್ದಿದ್ದವು. 2009ರಲ್ಲಿ ಎಲ್ಲ ಐದನ್ನೂ ಕಾಂಗ್ರೆಸ್ ಗೆದ್ದಿತ್ತು. ಆದರೆ, 2014 ಮತ್ತು 2019ರಲ್ಲಿ ಬಿಜೆಪಿ ಕ್ಲೀನ್‌ಸ್ವೀಪ್ ಮಾಡಿದೆ. ಈ ಬಾರಿ ಚುನಾವಣೆ ಇನ್ನಷ್ಟು ರಂಗು ಪಡೆದುಕೊಂಡಿದೆ.

ಇಲ್ಲಿ ತೆಹ್ರಿ ಗರ್ವಾಲ್, ಪೌರಿ ಗರ್ವಾಲ್, ಅಲ್ಮೋರಾ, ನೈನಿತಾಲ್-ಉದಮ್‌ಸಿಂಗ್ ನಗರ, ಹರಿದ್ವಾರ ಕ್ಷೇತ್ರಗಳಿವೆ. 2004ರಲ್ಲಿ ಬರೀ ನೈನಿತಾಲ್ ಇದ್ದು, 2009ರಲ್ಲಿ ಕ್ಷೇತ್ರ ಪುನರ್ವಿಂಗಡಣೆಯಾದಾಗ ನೈನಿತಾಲ್ ಜತೆಗೆ ಉದಮ್‌ಸಿಂಗ್ ನಗರ ಸೇರಿಸಿ ಒಂದು ಕ್ಷೇತ್ರ ಮಾಡಲಾಗಿದೆ. ವಿಶೇಷವೆಂದರೆ, 2009ರಲ್ಲಿ ಕಾಂಗ್ರೆಸ್‌ಗೆ ಎಲ್ಲ 5 ಕ್ಷೇತ್ರಗಳನ್ನೂ ನೀಡಿದ್ದ ಮತದಾರ ಮೋದಿ ವೇವ್‌ನಲ್ಲಿ 2014 ಮತ್ತು 2019ರಲ್ಲಿ ಬಿಜೆಪಿಯತ್ತ ವಾಲಿದ್ದಾನೆ. ಜತೆಗೆ ಇದು ದೇವಭೂಮಿಯಾಗಿದ್ದು, ಧಾರ್ಮಿಕತೆ ಹೆಚ್ಚು ಚರ್ಚೆಯಲ್ಲಿರುತ್ತದೆ.

2009 ಅನ್ನು ಹೊರತುಪಡಿಸಿ ನೋಡಿದರೆ, ಈ ರಾಜ್ಯದ ಇತಿಹಾಸ ಬಿಜೆಪಿ ಜತೆಗೇ ಹೆಚ್ಚು ಬೆಸೆದುಕೊಂಡಿದೆ. ಇಲ್ಲಿ 70 ಸದಸ್ಯರ ವಿಧಾನಸಭೆ ಇದ್ದು, 2002ರಲ್ಲಿ ಮೊದಲ ಸಿಎಂ ಆಗಿ ಕಾಂಗ್ರೆಸ್‌ನ ನಾರಾಯಣ ದತ್ತ ತಿವಾರಿ ನೇಮಕವಾಗಿದ್ದರು. 2007ರಲ್ಲಿ ಬಿಜೆಪಿ ಆಡಳಿತಕ್ಕೆ ಬಂದಿತ್ತು. ಭುವನ್ ಸಿಂಗ್ ಖಂಡೂರಿ, ರಮೇಶ್ ಪೋಖ್ರಿಯಾಲ್, ಭುವನ್ ಚಂದ್ರ ಖಂಡೂರಿ ಸಿಎಂ ಆದರು. ಮೂರು ಬಾರಿ ಇಲ್ಲಿ ಸರಕಾರ ಬದಲಾಗಿತ್ತು.

2012ರಲ್ಲಿ ಕಾಂಗ್ರೆಸ್ ಮತ್ತೆ ಗೆದ್ದಿತ್ತು. ಆಗ ವಿಜಯ್ ಬಹುಗುಣ ಮತ್ತು ಹರೀಶ್ ರಾವತ್ ಸಿಎಂ ಆದರು. 2017ರಲ್ಲಿ 57 ಸ್ಥಾನ ಗೆದ್ದ ಬಿಜೆಪಿ ಮೊದಲಿಗೆ ತ್ರಿವೇಂದ್ರ ಸಿಂಗ್ ರಾವತ್ ಅವರನ್ನು ಸಿಎಂ ಮಾಡಿತ್ತು. ಆದರೆ, 2021ರ ಚುನಾವಣೆಗೆ ಇನ್ನು ವರ್ಷವಿದೆ ಎಂದಾ ಸಿಎಂ ಬದಲಾವಣೆ ಮಾಡಿ ತೀರತ್ ಸಿಂಗ್ ರಾವತ್‌ರನ್ನು ನೇಮಕ ಮಾಡಿತ್ತು. 2022ರಲ್ಲಿ ಮತ್ತೆ ಬಿಜೆಪಿಯೇ ಅಧಿಕಾರಕ್ಕೇರಿದ್ದು, ಪುಷ್ಕರ್ ಸಿಂಗ್ ಧಾಮಿ ಸಿಎಂ ಆಗಿದ್ದಾರೆ.

**ಉತ್ತರಾಖಂಡ**



**ಮತದಾರರು**

- ಒಟ್ಟಾರೆ - 83.21 ಲಕ್ಷ
- ಪುರುಷ - 43.08 ಲಕ್ಷ
- ಮಹಿಳೆ - 40.12 ಲಕ್ಷ
- ಇತರೆ - 297 ಮಂದಿ

**2019ರ ಫಲಿತಾಂಶ**

| | |
|---|---|
| ಒಟ್ಟು ಸ್ಥಾನ | 05 |
| ಬಿಜೆಪಿ | 05 |
| ಕಾಂಗ್ರೆಸ್ | 00 |


**ಪ್ರಮುಖ ನಾಯಕರು**



ಪುಷ್ಕರ್ ಸಿಂಗ್ ಧಾಮಿ



ಹರೀಶ್ ರಾವತ್



ತ್ರಿವೇಂದ್ರ ಸಿಂಗ್ ರಾವತ್



ಕರಣ್ ಮಹಾರಾ

**ಪಕ್ಷಗಳ ಸ್ಥಿತಿಗತಿ**

**ಬಿಜೆಪಿ**

ಕಳೆದ ಎರಡು ಲೋಕಸಭೆ ಚುನಾವಣೆ ಮತ್ತು 2022ರ ವಿಧಾನಸಭೆ ಚುನಾವಣೆ ಅವಲೋಕಿಸಿದರೆ, ಬಿಜೆಪಿ ಭದ್ರವಾಗಿದೆ. ಇಲ್ಲಿ ಆಂತರಿಕವಾಗಿ ಯಾವುದೇ ಸಮಸ್ಯೆ ಇಲ್ಲ. ಮೋದಿ ಅಲೆ ಮತ್ತು ಪುಷ್ಕರ್ ಸಿಂಗ್ ಧಾಮಿ ಅವರ ನಾಯಕತ್ವದಲ್ಲಿ ಸಂಘಟನೆಯೂ ಚೆನ್ನಾಗಿದೆ. ಅಲ್ಲದೆ, ಇತ್ತೀಚೆಗಷ್ಟೇ ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿ ಮಾಡಿದ್ದು, ಇದು ಪ್ಲಸ್ ಆಗಲಿದೆ ಎಂಬುದು ಇವರ ಲೆಕ್ಕಾಚಾರ.

**ಕಾಂಗ್ರೆಸ್**

ಇಲ್ಲಿ ಕಾಂಗ್ರೆಸ್ ಬಹುತೇಕ ಎಲ್ಲ ಕ್ಷೇತ್ರಗಳಿಗೂ ಹೊಸ ಮುಖಗಳಿಗೇ ಆದ್ಯತೆ ನೀಡಿದೆ. ಅಂದರೆ ಐದರಲ್ಲಿ ನಾಲ್ಕು ಕ್ಷೇತ್ರಗಳಿಗೆ ಹೊಸ ಮುಖಗಳು ಬಂದಿವೆ. ಅಲ್ಮೋರಾದಲ್ಲಿ ಮಾತ್ರ ಪ್ರದೀಪ್ ತಮ್ಟಾ ಅವರಿಗೆ ಟಿಕೆಟ್ ನೀಡಲಾಗಿದೆ. ತೇಹ್ರಿಗೆ ಜೋಟ್ ಸಿಂಗ್ ಘಾನ್ಸೋಲಾ, ಪೌರಿಗೆ ಗಣೇಶ್ ಗೋಡಿಯಾಲ್, ಹರಿದ್ವಾರಕ್ಕೆ ವೀರೇಂದ್ರ ರಾವತ್, ನೈನಿತಾಲ್‌ಗೆ ಪ್ರಕಾಶ್ ಜೋಶಿಗೆ ಟಿಕೆಟ್ ನೀಡಿದೆ. ಈ ಮೂಲಕ ತಮ್ಮ ಕ್ಷೇತ್ರಗಳನ್ನು ವಾಪಸ್ ಪಡೆಯುವ ಇರಾದೆ ಕಾಂಗ್ರೆಸ್‌ನದ್ದು.

**ಚುನಾವಣಾ ವಿಷಯಗಳು**

**1. ಏಕರೂಪ ನಾಗರಿಕ ಸಂಹಿತೆ**

ಇತ್ತೀಚೆಗಷ್ಟೇ ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಯಾಗಿದೆ. ಬಿಜೆಪಿಯು ವಿಧಾನಸಭೆ ಚುನಾವಣೆ ವೇಳೆಯೇ ಇದನ್ನು ಜಾರಿ ಮಾಡುವುದಾಗಿ ಘೋಷಿಸಿತ್ತು. ಇದು ಬಿಜೆಪಿಗೆ ಲಾಭ ತರುವ ಸಾಧ್ಯತೆ ಇದೆ ಎಂಬ ವಿಶ್ಲೇಷಣೆಗಳಿವೆ.

**2. ಮೋದಿ ಅಲೆ**

ಉತ್ತರಾಖಂಡದಲ್ಲಿ ಹೆಚ್ಚು ಧಾರ್ಮಿಕ ಕ್ಷೇತ್ರಗಳಿದ್ದು, ಹಿಂದೂ ಧರ್ಮೀಯರೇ ಹೆಚ್ಚಾಗಿದ್ದಾರೆ. ಹೀಗಾಗಿ, ಮೋದಿ ಅಲೆ ಮತ್ತು ಹಿಂದುತ್ವದ ಅಲೆಯನ್ನು ಬಿಜೆಪಿ ನೆಚ್ಚಿಕೊಂಡಿದೆ.

**3. ನಿರುದ್ಯೋಗ**

ದೇಶದ ಇತರೆ ಭಾಗಗಳಂತೆಯೇ ಇಲ್ಲಿ ನಿರುದ್ಯೋಗ ಸಮಸ್ಯೆ ಚುನಾವಣೆ ವೇಳೆಯಲ್ಲಿ ಮತ್ತೆ ಸದ್ದು ಮಾಡುತ್ತಿದೆ. ಕಾಂಗ್ರೆಸ್ ಇದನ್ನು ಎಲ್ಲೆಡೆ ಪ್ರಸ್ತಾಪಿಸುತ್ತಿದೆ. ಜತೆಗೆ ಏಕರೂಪ ನಾಗರಿಕ ಸಂಹಿತೆಯ ವಿಚಾರವಾಗಿಯೂ ಕಾಂಗ್ರೆಸ್ ಮುಸ್ಲಿಂ ಮತಗಳನ್ನು ಕ್ರೋಢೀಕರಿಸುವ ಲೆಕ್ಕಾಚಾರದಲ್ಲಿದೆ.

# ರಾಜಸ್ಥಾನ ಲೋಕ ಕ್ಷೇತ್ರ ಮುಸ್ಲಿಮರಿಗಿಲ್ಲ ಟಿಕೆಟ್

### ರಾಜ್ಯದ 10 ಲೋಕ-100 ವಿಧಾನಸಭೆ ಕ್ಷೇತ್ರಗಳಲ್ಲಿ ಪ್ರಾಬಲ್ಯ; ಶೇ.10 ಮತಪ್ರಮಾಣ

**ರಾಜಸ್ಥಾನ:** ಮರಳುಗಾಡಿನ ರಾಜ್ಯ, ಒಂಟೆಗಳ ಲೋಕ, ರಜಪೂತರ ಸಾಮ್ರಾಜ್ಯ ರಾಜಸ್ಥಾನ ಉರಿಬಿಸಿಲ ನಡುವೆಯೇ ಲೋಕಸಭೆ ಚುನಾವಣೆಗೆ ನಿಧಾನಗತಿಯಲ್ಲಿ ಸಜ್ಜಾಗುತ್ತಿದೆ. ಕೆಲ ತಿಂಗಳ ಹಿಂದಷ್ಟೇ ವಿಧಾನಸಭೆಗೆ ಚುನಾವಣೆ ನಡೆದು ಭಾರತೀಯ ಜನತಾ ಪಕ್ಷ ಅಧಿಕಾರ ಹಿಡಿದಿದೆ.

ರಾಜಸ್ಥಾನದಲ್ಲಿ 200 ವಿಧಾನಸಭೆ ಮತ್ತು 25 ಲೋಕಸಭೆ ಕ್ಷೇತ್ರಗಳಿವೆ. ಇದರಲ್ಲಿ 100 ವಿಧಾನಸಭೆ ಕ್ಷೇತ್ರಗಳು ಮತ್ತು 10 ಲೋಕಸಭಾ ಕ್ಷೇತ್ರಗಳಲ್ಲಿ ಮುಸ್ಲಿಂ ಮತದಾರರ ಪ್ರಾಬಲ್ಯವಿದೆ. ಒಟ್ಟಾರೆ ರಾಜ್ಯದ ಮತ ಪ್ರಮಾಣದಲ್ಲಿ ಶೇ.10ರಷ್ಟು ಪಾಲು ಮುಸ್ಲಿಮರದಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ಈವರೆಗೆ 6 ಪಟ್ಟಿಗಳಲ್ಲಿ ವಿವಿಧ ರಾಜ್ಯಗಳ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿವೆ. ರಾಜಸ್ಥಾನದಲ್ಲಿ 25 ಲೋಕಸಭಾ ಕ್ಷೇತ್ರಗಳಿದ್ದು, ಎರಡೂ ಪಕ್ಷಗಳು 24 ಕ್ಷೇತ್ರಗಳಿಗೆ ಅಭ್ಯರ್ಥಿ ಪ್ರಕಟಿಸಿವೆ. 10 ಲೋಕಸಭಾ ಕ್ಷೇತ್ರಗಳಲ್ಲಿ ಮುಸ್ಲಿಂ ಪ್ರಾಬಲ್ಯವಿದ್ದರೂ ಎರಡೂ ಪ್ರಮುಖ ರಾಷ್ಟ್ರೀಯ ಪಕ್ಷಗಳು ಒಬ್ಬ ಮುಸ್ಲಿಂ ವ್ಯಕ್ತಿಗೂ ಟಿಕೆಟ್ ನೀಡಿಲ್ಲ!

ರಾಜ್ಯದ ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಒಬ್ಬ ಮುಸ್ಲಿಂ ವ್ಯಕ್ತಿಗೂ ಈವರೆಗೂ ಟಿಕೆಟ್ ನೀಡಿಲ್ಲ. ಬಿಜೆಪಿಯ ಈ ನಡೆ ನಿರೀಕ್ಷಿತ. ಆದರೆ, ಸದಾಕಾಲ ಕಾಂಗ್ರೆಸ್ ಪರವಾಗಿಯೇ ನಮ್ಮ ಸಮುದಾಯ ಸ್ಥಿರವಾಗಿ ನಿಂತಿದೆ. ಹಾಗಿದ್ದೂ ಕಾಂಗ್ರೆಸ್ ಟಿಕೆಟ್ ಪ್ರಕಟಿಸಿದ 24 ಕ್ಷೇತ್ರಗಳಲ್ಲಿ ಒಬ್ಬ ಮುಸ್ಲಿಂ ವ್ಯಕ್ತಿಗೂ ಟಿಕೆಟ್ ನೀಡದಿರುವುದನ್ನು ಒಪ್ಪಲಾಗದು ಎಂದು ಮುಸ್ಲಿಂ ಸಮುದಾಯ ಸಿಟ್ಟು ಹೊರಹಾಕಿದೆ. ಕಾಂಗ್ರೆಸ್‌ನಲ್ಲಿನ ಮುಸ್ಲಿಂ ನಾಯಕರಲ್ಲಿಯೇ ಪಕ್ಷದ ತೀರ್ಮಾನದ ಬಗ್ಗೆ ತೀವ್ರ ಅಸಮಾಧಾನ, ಆಕ್ರೋಶ ವ್ಯಕ್ತವಾಗುತ್ತಿದೆ.

ಬಿಜೆಪಿ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಹಮೀದ್ ಖಾನ್ ಮೇವಾತಿ, ಚುನಾವಣಾ ಟಿಕೆಟ್ ನೀಡಿದರಷ್ಟೇ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿದಂತೆ ಎನ್ನಲಾಗದು. ಪ್ರಧಾನಿ ಮೋದಿ ಸರಕಾರ ದೇಶಾದ್ಯಂತ ಮುಸ್ಲಿಂ ಸಮುದಾಯಕ್ಕೆ ಹಲವು ಕಲ್ಯಾಣ ಯೋಜನೆ ಜಾರಿಗೊಳಿಸಿದೆ. ಸಮುದಾಯಕ್ಕೆ ಶೈಕ್ಷಣಿಕ, ಔದ್ಯೋಗಿಕ, ಆರ್ಥಿಕ ಸಬಲೀಕರಣಕ್ಕೆ ಶಕ್ತಿತುಂಬುತ್ತಿದೆ ಎಂದು ಪ್ರತಿಕ್ರಿಯಿಸಿದ್ದಾರೆ.




**ನಾಯಕರ ಅಸಮಾಧಾನ**

ಈ ಮೊದಲು ನಡೆದ ಹಲವು ಚುನಾವಣೆಗಳಲ್ಲಿ ಕೆಲ ಲೋಕಸಭಾ ಕ್ಷೇತ್ರಗಳಲ್ಲಿಯಾದರೂ ರಾಜಸ್ಥಾನದ ಮುಸ್ಲಿಮರಿಗೆ ಕಾಂಗ್ರೆಸ್ ಟಿಕೆಟ್ ನೀಡಿದ್ದಿದೆ. ಆದರೆ, ಈ ಬಾರಿ ಒಬ್ಬರಿಗೂ ಚುನಾವಣಾ ಕಣಕ್ಕಿಳಿಯಲು ಪಕ್ಷ ಅವಕಾಶ ನೀಡಿಲ್ಲ ಏಕೆ? ಎಂದು ಹಿಂದಿನ (ಅಶೋಕ್ ಗೆಹ್ಲೋಟ್) ಸರಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದ, ಹಿರಿಯ ಕಾಂಗ್ರೆಸ್ ನಾಯಕ ಅಮೀನ್ ಖಾನ್ ಪ್ರಶ್ನೆ ಮಾಡಿದ್ದಾರೆ. ಇದನ್ನು ಕಾಂಗ್ರೆಸ್ ಮಾಡಿದ ಮೋಸ, ದ್ರೋಹ ಎಂದೇ ಮುಸ್ಲಿಂ ಸಮುದಾಯ ಪರಿಗಣಿಸಲಿದೆ ಎಂದೂ ಅಸಮಾಧಾನ ಹೊರಹಾಕಿದ್ದಾರೆ. ಇನ್ನೊಂದು ಕ್ಷೇತ್ರಕ್ಕೆ ಟಿಕೆಟ್ ಪ್ರಕಟಿಸುವುದಷ್ಟೇ ಬಾಕಿ ಇದೆ. ಈಗಲಾಗದರೂ ಪಕ್ಷದ ವರಿಷ್ಠರು ಎಚ್ಚೆತ್ತು ರಾಜಸ್ಥಾನದಲ್ಲಿ ಮುಸ್ಲಿಂ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಆಗ್ರಹಿಸಿದ್ದಾರೆ.

# ಇ.ಡಿ ವಶಪಡಿಸಿಕೊಂಡ 3000 ಕೋಟಿ ರು. ಬಡವರ ಕಲ್ಯಾಣಕ್ಕೆ!

**ದೆಹಲಿ:** ಜಾರಿ ನಿರ್ದೇಶನಾಲಯ (ಇ.ಡಿ) ದೇಶಾದ್ಯಂತ ನಡೆಸಿದ ಹಲವು ದಾಳಿಗಳಲ್ಲಿ ವಶಪಡಿಸಿಕೊಂಡ 3000 ಕೋಟಿ ರು.ಗಳನ್ನು ವಿವಿಧ ಯೋಜನೆಗಳ ಮೂಲಕ ಬಡ ಜನರಿಗೆ ತಲುಪುವಂತೆ ಮಾಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಬುಧವಾರ ಬಂಗಾಳದ ಕೃಷ್ಣನಗರ ಬಿಜೆಪಿ ಅಭ್ಯರ್ಥಿ ರಾಜಮಾತಾ ಅಮೃತಾ ರಾಯ್ ಅವರೊಂದಿಗೆ ಫೋನ್ ಮೂಲಕ ಮಾತನಾಡಿ ಚುನಾವಣೆ ವಿಚಾರವಾಗಿ ಚರ್ಚಿಸಿದರು. ಅದೇ ಸಂದರ್ಭ, ಕೇಂದ್ರದಲ್ಲಿ ಮತ್ತೆ ಬಿಜೆಪಿ ಸರಕಾರ ಬರಲಿದೆ. ಆಗ ಇ.ಡಿ ವಶಪಡಿಸಿಕೊಂಡಿರುವ 3 ಸಾವಿರ ಕೋಟಿ ರು.ಗಳನ್ನು ನೂತನ ಬಿಜೆಪಿ ಸರಕಾರ ವಿವಿಧ ಕಲ್ಯಾಣ ಯೋಜನೆಗಳ ಮೂಲಕ ದೇಶದ ಬಡಜನರಿಗೆ ತಲುಪುವಂತೆ ಮಾಡಲಿದೆ. ಈ ವಿಚಾರವನ್ನು ಪಶ್ಚಿಮ ಬಂಗಾಳದ ಜನತೆಗೂ ತಿಳಿಸಿ ಎಂದು ಅಮೃತಾ ರಾಯ್ ಅವರಿಗೆ ಹೇಳಿದ್ದಾರೆ. ಜೂನ್ ಮಾಸಾರಂಭ ಕೇಂದ್ರದಲ್ಲಿ ಹೊಸ ಸರಕಾರ ರಚನೆಯಾಗಲಿದೆ. ಆಗ ಇ.ಡಿ ದಾಳಿ ವೇಳೆ ವಶವಾದ ಹಣವನ್ನು ಬಡವರಿಗೆ ತಲುಪುವಂತೆ ಮಾಡಲು ಕಾನೂನು ಮತ್ತು ಯೋಜನೆ ರೂಪಿಸಲಾಗುವುದು ಎಂದು ಮೋದಿ ಹೇಳಿದ್ದಾರೆ. ಕೃಷ್ಣನಗರ ಕ್ಷೇತ್ರದಲ್ಲಿ ಟಿಎಂಸಿ ನಾಯಕ ಹಾಗೂ ಮಾಜಿ ಸಂಸದ ಮಹುವಾ ಮೊಯಿತ್ರಾ ವಿರುದ್ಧ ರಾಜಮಾತಾ ಅಮೃತಾ ರಾಯ್ ಅವರು ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ.



**ರಾಜಮಾತೆಗೆ ಧೈರ್ಯ ತುಂಬಿದ ಮೋದಿ**

ಇದೇ ಮೊದಲ ಬಾರಿ ರಾಜಕೀಯ ಪ್ರವೇಶಿಸಿರುವ ರಾಜಮಾತೆಗೆ ಪ್ರಧಾನಿ ಮೋದಿ, ಬಿಜೆಪಿ ಮತ್ತು ಪಕ್ಷದ ಅಭ್ಯರ್ಥಿಗಳ ಬಗ್ಗೆ ಪ್ರತಿಪಕ್ಷಗಳು ಏನು ಹೇಳುತ್ತವೆ ಎಂಬ ಬಗ್ಗೆ ಚಿಂತಿತರಾಗದಿರಿ ಎಂದು ಧೈರ್ಯ ಹೇಳಿದ್ದಾರೆ. ಅಲ್ಲದೇ, ರಾಜಕೀಯವನ್ನು ಈಗ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ಒಂದು ಬಿಜೆಪಿ ನೇತೃತ್ವ- ಇದು ದೇಶದಲ್ಲಿ ಭ್ರಷ್ಟಾಚಾರವನ್ನು ಬೇರುಸಹಿತ ಕಿತ್ತುಹಾಕಲು ಬದ್ಧವಾಗಿದೆ. ಇನ್ನೊಂದು- ಭ್ರಷ್ಟರನ್ನು ಬೆಂಬಲಿಸುವ ಇಂಡಿಯ ಒಕ್ಕೂಟ ಮತ್ತು ಟಿಎಂಸಿ ಎಂದು ರಾಜಕೀಯ ಪಾಠ ಮಾಡಿದ್ದಾರೆ.

# ಟಿಕೆಟ್ ಬೇಡ ಎಂದ ಕೇಂದ್ರ ಸಚಿವೆ

### ಚುನಾವಣೆ ವೆಚ್ಚಕ್ಕೆ ಬೇಕಾದಷ್ಟು ಹಣ ನನ್ನಲ್ಲಿಲ್ಲ: ನಿರ್ಮಲಾ ಸೀತಾರಾಮನ್



**ದೆಹಲಿ:** ದೇಶದಲ್ಲಿ ಲೋಕಸಭೆ ಚುನಾವಣೆ ಕಾವು ಈಗ ಬೇಸಿಗೆಯ ಬೇಗೆಯೊಟ್ಟಿಗೆ ತುರುಸಿನ ಸ್ಪರ್ಧೆ ನಡೆಸಿದೆ. ಬಿಜೆಪಿ, ಕಾಂಗ್ರೆಸ್ ಸೇರಿದಂತೆ ಪ್ರಮುಖ ಪಕ್ಷಗಳಲ್ಲಿ ರಾಜಕಾರಣಿಗಳೂ ಟಿಕೆಟ್ ಗಿಟ್ಟಿಸಿಕೊಳ್ಳಲು ಇನ್ನಿಲ್ಲದಂತೆ ಕಸರತ್ತು ನಡೆಸಿದ್ದಾರೆ. ವಶೀಲಿಬಾಜಿ, ಜಾತಿ ಪ್ರಶ್ನೆ, ಮಠಮಾನ್ಯಗಳ ಪ್ರಭಾವ, ಕಾರ್ಯಕರ್ತರಿಂದ ಶಕ್ತಿಪ್ರದರ್ಶನ ಎಲ್ಲಾ ನಡೆಸಿದ್ದಾರೆ. ಆದರೆ, ಇಲ್ಲೊಂದು ಬಿಜೆಪಿ ಟಿಕೆಟ್ ಕೊಡಲು ಮುಂದಾದರೂ, 'ನನಗೆ ಟಿಕೆಟ್ ಬೇಡ' ಎಂದು ನಿರಾಕರಿಸಿದ್ದಾರೆ. ಅಷ್ಟೇ ಅಲ್ಲ, ಲೋಕಸಭೆ ಚುನಾವಣೆಗೆ ವೆಚ್ಚ ಮಾಡಲು ಬೇಕಾಗುವಷ್ಟು ಹಣ ನನ್ನ ಬಳಿ ಇಲ್ಲವೂ ಇಲ್ಲ ಎಂದೂ ಹೇಳಿದ್ದಾರೆ!

ಹೀಗೆ ಹೇಳಿದವರು, ಬಿಜೆಪಿ ಟಿಕೆಟ್ ನಿರಾಕರಿಸಿದವರು ಬೇರಾರೂ ಅಲ್ಲ, ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ, ದೇಶದ ಅರ್ಥ ವ್ಯವಸ್ಥೆಯನ್ನು ಸದ್ಯ ನಿರ್ವಹಿಸುತ್ತಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್!

ಪಕ್ಷದ ಅಧ್ಯಕ್ಷರಾದ ಜಯಪ್ರಕಾಶ್ ನಡ್ಡಾ ಅವರು, ನನಗೆ ಲೋಕಸಭಾ ಚುನಾವಣೆ ಟಿಕೆಟ್ ಕೊಡಲು ಮುಂದಾದರು. ಆಂಧ್ರಪ್ರದೇಶ ಅಥವಾ ತಮಿಳುನಾಡು ರಾಜ್ಯಗಳಲ್ಲಿ ಯಾವುದೇ ಲೋಕಸಭೆ ಕ್ಷೇತ್ರದಿಂದಲಾದರೂ ಸರಿ, ನೀವು ಸ್ಪರ್ಧಿಸಿ ಎಂದು ಹೇಳಿದರು. ಯೋಚಿಸಿ ಹೇಳಲು ಕಾಲಾವಕಾಶವನ್ನೂ ನೀಡಿದರು. 10 ದಿನಗಳ ಕಾಲ ಯೋಚನೆ ಮಾಡಿದೆ. ಕಡೆಗೆ ನನ್ನಿಂದ ಈ ಚುನಾವಣಾ ಸ್ಪರ್ಧೆ ಸಾಧ್ಯವಿಲ್ಲ. ಚುನಾವಣೆಗೆ ವೆಚ್ಚ ಮಾಡುವಷ್ಟು ಹಣವೂ ನನ್ನಲ್ಲಿಲ್ಲ ಎಂದು ಹೇಳಿ, ಸ್ಪರ್ಧೆಗೆ ನಿರಾಕರಿಸಿದೆ ಎಂದು ನಿರ್ಮಲಾ ಸೀತಾರಾಮನ್ ಬುಧವಾರ ಮಾಧ್ಯಮ ಸಂಸ್ಥೆಯ ಸಂವಾದದಲ್ಲಿ ಹೇಳಿದ್ದಾರೆ. ಅಲ್ಲದೇ, ಚುನಾವಣೆ ಎದುರಿಸುವಾಗ, ನಿನ್ನ ಜಾತಿ ಯಾವುದು? ಯಾವ ಸಮುದಾಯದಿಂದ ಬಂದಿದ್ದೀಯಾ? ನಿನ್ನ ಧರ್ಮವೇನು? ಆ ಜಾತಿಯೇ-ಈ ಜಾತಿಯೇ? ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಲು, ಆ ವಿಚಾರವಾಗಿ ಚರ್ಚೆಗಿಳಿಯಲು ನನಗೆ ಆಗುವುದಿಲ್ಲ. ಈ ಅಂಶ ಕೂಡಾ ಲೋಕಸಭಾ ಚುನಾವಣೆ ಅವಕಾಶವನ್ನು ನಿರಾಕರಿಸಲು ಕಾರಣವಾಗಿದೆ ಎಂದು ಸಚಿವೆ ವಿಷದೀಕರಿಸಿದರು. ನನ್ನ ಅದೃಷ್ಟ ಚೆನ್ನಾಗಿತ್ತು. ಪಕ್ಷದ ಅಧ್ಯಕ್ಷರು ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಸುಮ್ಮನಾದರು. ಇಲ್ಲವಾಗಿದ್ದರೆ ನನ್ನ ಪರಿಸ್ಥಿತಿ ಕಷ್ಟವಾಗುತ್ತಿತ್ತು ಎಂದು ಸಚಿವೆ ನೆಮ್ಮದಿಯ ನಿಟ್ಟುಸಿರುಬಿಟ್ಟಿದ್ದಾರೆ.



ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ, ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ ಅಣ್ಣಾಮಲೈ ಕೊಯಮತ್ತೂರು ಲೋಕಸಭಾ ಕ್ಷೇತ್ರದಿಂದ ಬುಧವಾರ ನಾಮಪತ್ರ ಸಲ್ಲಿಸಿದರು. ಈ ಸಂದರ್ಭ ಕೊಯಮತ್ತೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕಿ ವನಥಿ ಶ್ರೀನಿವಾಸನ್, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ರಮೇಶ್ ಹಾಜರಿದ್ದರು. ಚುನಾವಣಾಧಿಕಾರಿ ಕ್ರಾಂತಿಕುಮಾರ್ ಪತಿ ನಾಮಪತ್ರ ಸ್ವೀಕರಿಸಿದರು.



ಲೋಕಸಭೆ ಚುನಾವಣೆ ವೇಳೆ ಅಸ್ಸಾಂನ ಯುನೈಟೆಡ್ ಪೀಪಲ್ಸ್ ಪಾರ್ಟಿ ಆಫ್ ಲಿಬರಲ್ ಪಕ್ಷದ ಸದಸ್ಯ ಬೆಂಜಮಿನ್ ಬಾಸುಮತರಿ 500 ರು. ನೋಟಿನ ಕಂತೆಗಳ ಮೇಲೆ ಮಲಗಿ ನಿದ್ರಿಸುತ್ತಿರುವ ಫೋಟೋ ವೈರಲ್ ಆಗಿದ್ದು ಚರ್ಚೆಗೆ ಗ್ರಾಸವಾಗಿದೆ. ಪಕ್ಷ ಈ ಸುದ್ದಿಯಿಂದ ಅಂತರ ಕಾಯ್ದುಕೊಂಡಿದೆ.

# ಶಿವಸೇನೆ ಉದ್ಧವ್ ಬಣ 16 ಅಭ್ಯರ್ಥಿ ಪ್ರಕಟ

### ಅನಂತ್ ಗೀತೆ, ಸಾವಂತ್‌ಗೆ ಟಿಕೆಟ್



**ಮುಂಬೈ:** ಲೋಕಸಭೆ ಚುನಾವಣೆಗೆ ಶಿವಸೇನೆ(ಉದ್ಧವ್ ಬಣ) 16 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬುಧವಾರ ಪ್ರಕಟಿಸಿದೆ. 2022ರಲ್ಲಿ ಶಿವಸೇನೆ ವಿಭಜನೆಯಾದ ಬಳಿಕ ಉದ್ಧವ್ ಠಾಕ್ರೆ ಬಣದಲ್ಲೇ ಉಳಿದ ಐವರೂ ಸಂಸದರಿಗೆ ಟಿಕೆಟ್ ನೀಡಲಾಗಿದೆ.

ಹಾಲಿ ಸಂಸದ-ಮಾಜಿ ಸಚಿವ ಅರವಿಂದ್ ಸಾವಂತ್(ದಕ್ಷಿಣ ಮುಂಬೈ), ರಾಜನ್ ವಿಚಾರೆ(ಥಾಣೆ), ವಿನಾಯಕ್ ರಾವತ್ (ರತ್ನಗಿರಿ-ಸಿಂಧುದುರ್ಗ), ಓಂರಾಜೆ ನಿಂಬಾಳ್ಕರ್(ಧಾರಶಿವ್) ಮತ್ತು ಸಂಜಯ್ ಜಾಧವ್ (ಪರ್ಭಾನಿ) ಅವರು ಮತ್ತೆ ಟಿಕೆಟ್ ನೀಡಲಾಗಿದೆ. ಮಾಜಿ ಕೇಂದ್ರ ಸಚಿವ ಅನಂತ್ ಗೀತೆ(ರಾಯಗಡ) ಅವರನ್ನು ಕಣಕ್ಕಿಳಿಸಲಾಗಿದೆ. ರಾಜನ್ ವಿಚಾರೆ, ಮಹಾರಾಷ್ಟ್ರ ಸಿಎಂ ಏಕನಾಥ್ ಶಿಂಧೆ ಅವರ ತವರು ಥಾಣೆಯಲ್ಲಿ ಕಣಕ್ಕಿಳಿಯುದ್ದಾರೆ.

ಛತ್ರಪತಿ ಸಂಭಾಜಿ ನಗರ ಕ್ಷೇತ್ರದಿಂದ ಹಿರಿಯ ನಾಯಕ ಚಂದ್ರಕಾಂತ್ ಖೈರೆ ಅವರನ್ನು ಕಣಕ್ಕಿಳಿಸಲಾಗಿದೆ. ಖೈರೆ 2019ರಲ್ಲಿ ಆಲ್ ಇಂಡಿಯಾ ಮಜ್ಲಿಸ್-ಇ-ಇತ್ತೆಹಾದುಲ್ ಮುಸ್ಲಿಮಿನ್(ಎಐಎಂಐಎಂ) ಅಭ್ಯರ್ಥಿ ಇಮ್ತಿಯಾಜ್ ಜಲೀಲ್ ವಿರುದ್ಧ ಸೋತಿದ್ದರು.

ಎನ್‌ಸಿಪಿ ತೊರೆದು ಶಿವಸೇನೆ ಸೇರಿದ್ದ ಸಂಸದ ಸಂಜಯ್ ಪಾಟೀಲ್ ಅವರನ್ನು ಮುಂಬೈ ಈಶಾನ್ಯದಿಂದ ಕಣಕ್ಕಿಳಿಸಲಾಗಿದೆ.

**ಶುಕ್ರವಾರ ಸಂಜೆಯೊಳಗೆ ಉತ್ತರಿಸುವಂತೆ ಸೂಚನೆ**

# ಸುಪ್ರಿಯಾ, ಘೋಷ್‌ಗೆ ನೋಟಿಸ್

**ದೆಹಲಿ:** ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರಣಾವತ್ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನಾಟೆ ಹಾಗೂ ಬಿಜೆಪಿಯ ದಿಲೀಪ್ ಘೋಷ್ ಅವರಿಗೆ ಚುನಾವಣಾ ಆಯೋಗ ಶೋಕಾಸ್ ನೋಟಿಸ್ ನೀಡಿದೆ.

ನಿಮ್ಮ ಹೇಳಿಕೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ, 'ಅಮಾನವೀಯ ಮತ್ತು ಕೆಟ್ಟ ಅಭಿರುಚಿ'ಯಿಂದ ಕೂಡಿವೆ ಎಂಬುದು ಕಂಡು ಬಂದಿದೆ. ಅಲ್ಲದೆ, ಇದು ಮೇಲ್ನೋಟಕ್ಕೆ ಮಾದರಿ ನೀತಿ ಸಂಹಿತೆಯ ನಿಬಂಧನೆಗಳನ್ನು ಉಲ್ಲಂಘಿಸಿದೆ ಎಂದು ಕಂಡುಬಂದಿದೆ ಎಂದು ಚುನಾವಣಾ ಆಯೋಗ ಹೇಳಿದೆ. ನಿಮ್ಮ ವಿರುದ್ಧ ಏಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕೇಳಿರುವ ಅದು, ನೋಟಿಸ್‌ಗೆ ಉತ್ತರಿಸುವಂತೆ ಶುಕ್ರವಾರ ಸಂಜೆ 5 ಗಂಟೆಯ ಕಡುವು ನೀಡಿದೆ. ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎಂದಿದೆ.

ಸುಪ್ರಿಯಾ ಅವರು ತಮ್ಮ ಇನ್‌ಸ್ಟಾಗ್ರಾಂ ಅಕೌಂಟ್‌ನಲ್ಲಿ ನಟಿ ಹಾಗೂ ಬಿಜೆಪಿ ಅಭ್ಯರ್ಥಿ ಕಂಗನಾ ರಣಾವತ್ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ಹಾಕಿದ್ದಾರೆ ಎಂಬ ಆರೋಪ ಮಾಡಲಾಗಿತ್ತು. ಅಲ್ಲದೆ, ಈ ಪೋಸ್ಟ್ ಅನ್ನು ಡಿಲೀಟ್ ಮಾಡಲಾಗಿದ್ದು, ಬೇರೆಯವರು ಪೋಸ್ಟ್ ಮಾಡಿದ್ದಾರೆ ಎಂದಿದ್ದರು. ಇನ್ನು ಪಶ್ಚಿಮ ಬಂಗಾಳದ ದಿಲೀಪ್ ಘೋಷ್ ಅವರು ಮಮತಾ ಬ್ಯಾನರ್ಜಿ ಅವರ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರು. ಅವರು ತಂದೆ ಯಾರು ಎಂಬ ಬಗ್ಗೆ ಹೇಳಿಕೆ ನೀಡಿದ್ದರು.

# ಒಡಿಶಾ: ಬಿಜೆಡಿ ಪ್ರಥಮ ಪಟ್ಟಿ ಪ್ರಕಟ

**ಭುವನೇಶ್ವರ:** ಒಡಿಶಾದಲ್ಲಿನ ಆಡಳಿತಾರೂಢ ಪಕ್ಷ 'ಬಿಜು ಜನತಾ ದಳ'(ಬಿಜೆಡಿ) ರಾಜ್ಯದಲ್ಲಿನ 21 ಲೋಕಸಭಾ ಕ್ಷೇತ್ರಗಳ ಪೈಕಿ 9 ಕ್ಷೇತ್ರಗಳಿಗೆ ಹಾಗೂ ವಿಧಾನಸಭೆಯ 147 ಸ್ಥಾನಗಳ ಪೈಕಿ 72 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಮೊದಲ ಪಟ್ಟಿಯಲ್ಲಿ ಬುಧವಾರ ಪ್ರಕಟಿಸಿದೆ. ಬಿಜೆಡಿ ಪ್ರಧಾನ ಕಾರ್ಯದರ್ಶಿ ಪ್ರಣವ್ ಪ್ರಕಾಶ್ ದಾಸ್-ಸಂಬಾಲ್‌ಪುರ ಲೋಕಸಭಾ ಕ್ಷೇತ್ರದಲ್ಲಿ ಕಣಕ್ಕಿಳಿಯಲಿದ್ದಾರೆ. ಈ ಕ್ಷೇತ್ರದಲ್ಲಿ ಬಿಜೆಪಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಸ್ಪರ್ಧೆಗಿಳಿಸಿದೆ.



ಕಾಂಗ್ರೆಸ್, ಎನ್‌ಸಿಪಿ(ಪವಾರ್) ಮತ್ತು ಶಿವಸೇನೆ(ಉದ್ಧವ್ ಬಣ) ಒಳಗೊಂಡ ಎಂವಿಎ ಜತೆ ಸೀಟು ಹಂಚಿಕೆಗೆ ಸಂಬಂಧಿಸಿ ಒಮ್ಮತ ಮೂಡಿಲ್ಲ. ಮೈತ್ರಿ ಮಾತುಕತೆ ವಿಫಲವಾಗಿದೆ. ಏಪ್ರಿಲ್-ಮೇ ತಿಂಗಳಲ್ಲಿ ನಡೆಯುವ ಲೋಕಸಭೆ ಚುನಾವಣೆಗೆ ಮಹಾರಾಷ್ಟ್ರದ ಪ್ರತಿಪಕ್ಷವಾದ ಮಹಾ ವಿಕಾಸ್ ಅಘಾಡಿ(ಎಂವಿಎ) ಮೈತ್ರಿಕೂಟದ ಜತೆಗೆ ಮೈತ್ರಿ ಇಲ್ಲ.

-ಪ್ರಕಾಶ್ ಅಂಬೇಡ್ಕರ್
ಡಾ. ಬಿ.ಆರ್.ಅಂಬೇಡ್ಕರ್ ಮೊಮ್ಮಗ



ಇತಿಹಾಸ ಮರುಕಳಿಸುತ್ತಿದೆ. ಭ್ರಷ್ಟಾಚಾರ ಆರೋಪ ದಲ್ಲಿ ಜೈಲು ಪಾಲಾ ದರೂ ರಾಜೀನಾಮೆ ನೀಡಲು ಅರವಿಂದ ಕೇಜ್ರಿವಾಲ್ ನಿರಾಕರಿಸುತ್ತಿದ್ದಾರೆ. ದಶಕಗಳ ಹಿಂದೆ ಬಿಹಾರದಲ್ಲಿ ಲಾಲೂ ಪ್ರಸಾದ್ ಅವರ ಪತ್ನಿ ರಾಬ್ರಿ ದೇವಿ ಅವರು ಮುಖ್ಯಮಂತ್ರಿ ಪದವಿಗೇರಿದ ರೀತಿಯಲ್ಲೇ ದೆಹಲಿ ಸಿಎಂ ಗಾದಿಗೇರಲು ಸುನೀತಾ ಕೇಜ್ರಿವಾಲ್ ಅವರೂ ಪ್ರಯತ್ನ ನಡೆಸಿದ್ದಾರೆ. ಲಾಲೂ ಪ್ರಸಾದ್ ಅವರು ಬಂಧನವಾದಾಗಲೂ ಅವರು ತಕ್ಷಣ ರಾಜೀನಾಮೆ ನೀಡಿರಲಿಲ್ಲ. ಈಗ ದೆಹಲಿಯಲ್ಲೂ ಅದೇ ನಡೆಯುತ್ತಿದೆ.

-ಅನುರಾಗ್ ಠಾಕೂರ್
ಕೇಂದ್ರ ಸಚಿವ